ಭೂಮಿ ಮೇಲೆ ಬೇರೆ ಯಾರೂ ಇರಲಿಲ್ಲ...' ಪೊಟ್ಟಣದ ಒಂದು ತುದಿಯಿಂದ ಶುರುವಾಗುವ ವಾಕ್ಯಗಳು ಸುತ್ತಿ ಇನ್ನೊಂದು ತುದಿಗೆ ತಲುಪುತ್ತಿದ್ದವು. ಸುಮಿ ಹೀಗೆ ಪೊಟ್ಟಣವನ್ನು ಬುಗರಿಯಂತೆ ತಿರುಗಿಸುತ್ತಾ ಹೋದಳು. ಕಥೆಯೂ ತಿರುಗುತ್ತಾ ಹೋಯಿತು!

'ರಾಜಕುಮಾರಿಯ ಸೌಂದರ್ಯದ ಬಗ್ಗೆ ಕೇಳಿ ಮರುಳಾದ ರಾಕ್ಷಸನೊಬ್ಬ ಪಾರಿವಾಳದ ವೇಷದಲ್ಲಿ ಅರಮನೆಯನ್ನು ಪ್ರವೇಶಿಸಿ, ಅವಳನ್ನು ಹೊತ್ತೊಯ್ಯುತ್ತಾನೆ. ನದಿ, ಪರ್ವತಗಳನ್ನೆಲ್ಲ ದಾಟಿ ಸಪ್ತಸಾಗರಗಳಾಚೆಯ ತನ್ನ ಕೋಟೆಗೆ ಕರೆದೊಯ್ಯುತ್ತಾನೆ...'

ಅಯ್ಯೋ ಪಾಪ! ಸುಮಿಗೆ ಕಣ್ಣುಗಳಲ್ಲಿ ನೀರು ತುಂಬಿಕೊಂಡಿತು. ಕಥೆ ಸುರಳಿಯೊಳಗೆ ಸೇರಿಕೊಂಡಿದೆ. ಏನು ಮಾಡಲಿ? ಕುತೂಹಲ ತಡೆಯಲಾಗದೇ ಸುರಳಿ ಸುತ್ತಿದ ಭಾಗವನ್ನು ಮೆಲ್ಲನೆ ಸಡಲಿಸುತ್ತಾ ಹೋದಳು.

'ಆಕಾಶಮಾರ್ಗವಾಗಿ ಸಾಗುವಾಗ ಪರ್ವತ ಸಾಲುಗಳ ನಡುವೆ ಸುಂದರ ರಾಜ್ಯವೊಂದು ಕಾಣುತ್ತದೆ. ತನ್ನನ್ನು ರಕ್ಷಿಸುವ ರಾಜಕುಮಾರ ಈ ರಾಜ್ಯದಲ್ಲಿದ್ದಾನೆ ಎಂದು ರಾಜಕುಮಾರಿಗೆ ಭಾಸವಾಗುತ್ತದೆ. ತನ್ನ ಮುತ್ತಿನ ಕಂಠಹಾರವನ್ನು ಕಳಚಿ ಒಂದೊಂದೇ ಮಣಿಗಳನ್ನು ಕೆಳಗೆ ಬೀಳಿಸುತ್ತಾಳೆ...'

ಕಥೆ ಕುತೂಹಲ ಘಟ್ಟಕ್ಕೆ ತಲುಪುವಲ್ಲಿ ವಾಕ್ಯಗಳು ಚಿಕ್ಕದಾಗುತ್ತಾ ಹೋದವು. ಸುಮಿಯ ಬೇಚೈನಿ ದೀರ್ಘವಾಯಿತು. ರಾಜಕುಮಾರಿಯ ಮುತ್ತಿನ ಮಣಿಗಳು ಎಲ್ಲೆಲ್ಲಿ ಬಿದ್ದವೋ? ಚೂರು ಬಿಡಿಸಿದರೆ ಮುಂದಿನ ಕಥೆ ತಿಳಿಯುತ್ತದೆ ಎಂದು ಸಕ್ಕರೆ ಪೊಟ್ಟಣವನ್ನು ಇನ್ನಷ್ಟು ಸಡಿಲಿಸಿದಳು.

'ವಿರಾಟಪುರಿಯ ಶೂರನೂ, ಸ್ಪುರದ್ರೂಪಿಯೂ ಆದ ರಾಜಕುಮಾರ ಅನಿರುದ್ಧ ಪ್ರತಾಪನು ಕುದುರೆಯನ್ನೇರಿ ಕಾಡಿಗೆ ಹೋದವನು, ದಾರಿಬದಿಯ ತೊರೆಯಲ್ಲಿ ನೀರು ಕುಡಿಯುವಾಗ ಮುತ್ತಿನ ಮಣಿಯೊಂದು ಬೊಗಸೆಯಲ್ಲಿ ಬೀಳುತ್ತದೆ. ಏನಾಶ್ಚರ್ಯ! ಮುತ್ತಿನಮಣಿಯು ಆಕಾಶದಿಂದ ಹಾರಿಬಂದು ತನ್ನ ಕರಗಳಲ್ಲಿ ಬೀಳುತ್ತದೆಯೆಂದರೆ! ಆ ಮಣಿಗೆ ಆಹ್ಲಾದಕರ ಸುಗಂಧ ಬೇರೆ! ರಾಜಕುಮಾರನು ಆ ಮಣಿಯನ್ನು ಕೂಲಂಕಷವಾಗಿ ಪರಿಶೀಲಿಸಿದಾಗ ರೇಷ್ಮೆಯಂಥ ಕೂದಲೆಳೆಯು ಅದಕ್ಕೆ ಸುತ್ತಿಕೊಂಡಿರುವುದು ಕಂಡು ಆ ಕೂದಲೊಡತಿಯ ಮೇಲೆ ಮೋಹಗೊಳ್ಳುತ್ತಾನೆ...'

ಸುಮಿಗೆ ತುಂಬಾ ಖುಷಿಯಾಯ್ತು. ಈಗ ಅನಿರುದ್ಧ ಪ್ರತಾಪನು ದುಷ್ಟ ರಾಕ್ಷಸನನ್ನು ಸಂಹರಿಸಿ ರಾಜಕುಮಾರಿಯನ್ನು ರಕ್ಷಿಸುತ್ತಾನೆ. ಆಮೇಲೆ... ಆಮೇಲೆ ರಾಜಕುಮಾರಿಯನ್ನು....ಛೀ! ಸುಮಿಗೆ ನಾಚಿಕೆಯಾಯ್ತು. ಆದರೆ ರಾಜಕುಮಾರಿ ಎಲ್ಲಿದ್ದಾಳೆ ಅಂತ ರಾಜಕುಮಾರನಿಗೆ ತಿಳಿಯಬೇಕಲ್ಲವೇ? ಅವನು ರಾಜಕುಮಾರ! ಮೇಲಾಗಿ ಅವನಿಗೆ ರಾಜಕುಮಾರಿಯ ಮೇಲೆ ಪ್ರೇಮವೂ ಉಂಟಾಗಿದೆ. ಪ್ರೀತಿ- ಪ್ರೇಮದಿಂದ ಎಲ್ಲವೂ ಸಾಧ್ಯ ಆಗಬಹುದು! ಕಥೆಯ ಮುಂದಿನ ಭಾಗದಲ್ಲಿ ಇದೆಲ್ಲ ಬರೆದಿರಬೇಕಲ್ವಾ! ಸುಮಿಗೆ ಕುತೂಹಲ ತಡೆಯೋಕಾಗಲಿಲ್ಲ. ಸುರುಳಿಯ ತುದಿಯಲ್ಲಿ ಸಪ್ತಸಾಗರದಾಚೆಯ ದ್ವೀಪವೂ ರಾಜಕುಮಾರನೂ ರಾಜಕುಮಾರಿಯೂ ಹಾರುವ ಕುದುರೆಯೂ ಕಥೆಯ ಬಿಡುಗಡೆಗಾಗಿ ಕಾಯುತ್ತಿರುವಂತೆ ಅನಿಸಿತು. ಅವಸರವಸರದಲ್ಲಿ ಕಾಗದವನ್ನು ಪೂರ್ತಿ ಬಿಡಿಸಿದಾಗ ಕಥೆಯ ಸಾಲುಗಳು ಮುಗಿದು ಕೊನೆಯಲ್ಲಿ 'ಮುಂದಿನ ಪುಟಕ್ಕೆ' ಎಂದು ಬರೆದಿತ್ತು.

ಅಷ್ಟರವರೆಗೆ ಮನೆಯ ದಣಪೆ ತಲುಪಿದ್ದ ಸುಮಿ ಒಳಗೆ ಅಮ್ಮನ ಮಾತು ಕೇಳಿದಾಗಲೇ ವಾಸ್ತವ ಲೋಕಕ್ಕೆ ಬಂದದ್ದು. ಅಯ್ಯೋ ದೇವರೇ!! ಕಥೆ ಓದುವ ಧ್ಯಾನದಲ್ಲಿ ಸುರಳಿ ಬಿಚ್ಚಿ ಸಕ್ಕರೆಯೆಲ್ಲ ದಾರಿ ಪಾಲಾಗಿದೆ! ಕೈಯಲ್ಲೀಗ ಖಾಲಿ ಕಾಗದ ಮಾತ್ರ ಉಳಿದಿದೆ. ಸುಮಿಗೆ ಇದ್ದಕ್ಕಿದ್ದಂತೆ ನಡುಕವೇ ಶುರುವಾಯಿತು. ಅಮ್ಮ ತನ್ನನ್ನು ಕೋಲಿನಿಂದ ಬಡಿಯುತ್ತಾಳೆ. ಸವತಿ ಮಗಳು ನೀನು ಎಂದು ಜರಿಯುತ್ತಾಳೆ. ಏನು ಮಾಡಲಿ? ಕಾಗದವನ್ನು ಹಿಡಿದ ಬೆರಳುಗಳು ಬೆವತುಕೊಂಡವು. ಜೋರಾಗಿ ಬೀಸಿದ ಗಾಳಿಗೆ ಕಾಗದ ಪರಪರ ಬಡಿದು ಕೈಯಿಂದ ಬಿಡಿಸಿಕೊಂಡು ಗಾಳಿಪಟವಾಯಿತು.

ಸುಮಿ ಭಯದಿಂದ ಬಂದ ದಾರಿಯಲ್ಲೇ ಓಡಿದಳು. ಮಿಂಚಿನಂತೆ ಓಡಿ ಮತ್ತೆ ಸಕ್ಕರೆ ಕೊಳ್ಳಬೇಕು. ಇಲ್ಲದಿದ್ದರೆ ಈ ಅಮ್ಮ ಕೊಂದೇ ಹಾಕುತ್ತಾಳೆ. ಅಲ್ಲಲ್ಲೋ ಸಕ್ಕರೆ ಕಾಳುಗಳು ಚೆಲ್ಲಿದ್ದು ಕಂಡು ನಿಧಾನಿಸಿದಳು. ಇರುವೆಗಳು ಒಂದೊಂದೇ ಕಾಳುಗಳನ್ನು ಹೇರಿಕೊಂಡು ಸಾಲಿನಲ್ಲಿ ಸಾಗುತ್ತಿದ್ದವು. ಮಂಡಿಯೂರಿ ಕೂತು ಇರುವೆಗಳ ಚುರುಕುತನದ ಸಂಭ್ರಮದಲ್ಲಿ ಒಂದು ಕ್ಷಣ ಮೈಮರೆತಳು. ಅವಳ ಗೆಳತಿ ಮಾಧವಿಯ